


ವಲಸೆಗಾರರು ಆಕ್ರಮಿಸಿಕೊಂಡು ನೆಲೆಸಿದಾಗ ಬುಡಕಟ್ಟು ಜನರ ಬಾಳಿನಲ್ಲಿ ಉಂಟಾದ ತಲ್ಲಣ ಮತ್ತು ಪಲ್ಲಟಗಳ ಸೂಕ್ಷ್ಮವಾದ ನೋಟಗಳಿಲ್ಲ. ಇದಕ್ಕೆ ಕಾರಣ, ಬಂಡವಾಳವಾದಿ ಅಭಿವೃದ್ಧಿ ಪರಿಕಲ್ಪನೆಯನ್ನು ಲೇಖಕರು ಅವಿಮರ್ಶಾತ್ಮಕವಾಗಿ ಒಪ್ಪಿಕೊಂಡಿರುವುದು. ಆದರೆ ಮಾನವಶಾಸ್ತ್ರೀಯ ವಿವರಣೆಗಳ ಆಚೆ 'ನೀಲಗಿರಿ' ಮುಖ್ಯವಾಗಿರುವುದು ಅಲ್ಲಿರುವ ಆದಿವಾಸಿ ಜನಪದ ಕಥೆಗಳಿಂದ. ಈ ಕಥೆಗಳು ಲೇಖಕರ ವಿವರಣೆಗಳಲ್ಲಿ ಅಷ್ಟಾಗಿ ಕಾಣದ ಆದಿವಾಸಿಪ್ರಜ್ಞೆ ಅಥವಾ ಲೋಕದೃಷ್ಟಿಯನ್ನು ಚೆನ್ನಾಗಿ ಕಾಣಿಸುತ್ತವೆ.

ಪರಂಜ್ಯೋತಿಯವರ ಅನುಭವ ಕಥನಗಳಲ್ಲಿ ಇಷ್ಟವಾಗುವುದು ಅಲ್ಲಿರುವ ಆಪ್ತವಾದ ಭಾಷೆ. 'ನನಗೆ ಹೆಚ್ಚಿಗೆ ಗೊತ್ತಿಲ್ಲ. ಗೊತ್ತಿರುವುದನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ನಾನು ಕಾಣಿಸುತ್ತಿರುವ ಸತ್ಯಕ್ಕೆ ನನಗೆ ಅರಿವಾಗಿರದ ಮುಖಗಳೂ ಇವೆ' ಎಂಬ ನಮ್ರತೆಯಿಂದ ಹುಟ್ಟುವ ಆಪ್ತತೆಯಿದು. ಯಾರ ಜೀವನದ ಬಗ್ಗೆಯೂ ನೈತಿಕ ತೀರ್ಮಾನ ಕೊಡದೆ, ಬಾಳಿನ ಸುಳಿಗೆ ಸಿಕ್ಕ ಜನರನ್ನು ಹಲವು ಮಗ್ಗುಲುಗಳಿಂದ ಅರ್ಥಮಾಡಿಕೊಳ್ಳುವ ಅನುಭೂತಿಯಿದು. ಲೇಖಕ ತನ್ನ ಲೋಕದೃಷ್ಟಿಯನ್ನು ಓದುಗರ ಮೇಲೆ ಹೇರದೆ, ಕಾಣಿಸುವ ಘಟನೆ ಮತ್ತು ವಿವರಗಳೇ ಮಾತಾಡುವ ಶೈಲಿಯ ಈ ಜೀವನಪ್ರೀತಿಯುಳ್ಳ ಕಥನಕ್ರಮವು, ಓದುಗರು ತಮ್ಮದೇ ತೀರ್ಮಾನಕ್ಕೆ ಬರುವ ಅವಕಾಶವನ್ನು ಮುಕ್ತವಾಗಿಡುತ್ತದೆ. ಕಥೆ-ಕಾದಂಬರಿಗಳಲ್ಲಿ ತುಸು ವಾಚಾಳಿಯಾಗಿ ತೋರುವ ಪರಂಜ್ಯೋತಿ, 'ಮಂಜಿನೆಡೆಯ ಚಿತ್ರಗಳು' ಕೃತಿಯಲ್ಲಿ 'ಹಿತಮಿತಮೃದು ವಚನಚತುರ' ಶೈಲಿಯಲ್ಲಿ ಬರೆಯುತ್ತಾರೆ. ಎಷ್ಟೊಂದು ಗೊತ್ತಿದ್ದೂ ಹೇಳಲು ಯಾಕಿಷ್ಟು ಜಿಪುಣತನ ಎನಿಸುವಷ್ಟು ಧ್ವನಿಪೂರ್ಣವಾದ ಸಂಕ್ಷಿಪ್ತ ಕಥನಕ್ರಮದಲ್ಲಿ ಬರೆಯುತ್ತಾರೆ. ಇದು ಇಲ್ಲಿನ ಘಟನೆಗಳಿಗೂ, ಜೀವನಚಿತ್ರಗಳಿಗೂ, ನಿಸರ್ಗದ ವರ್ಣನೆಗಳಿಗೂ ಒಂದು ಪರಿಯ ಪ್ರಾಮಾಣಿಕತೆ ಒದಗಿಸಿದೆ. ಗದ್ಯಕ್ಕೊಂದು ಅಥೆಂಟಿಸಿಟಿ ತಂದುಕೊಟ್ಟಿದೆ. ಕನ್ನಡದ ಓದುಗರು ಮತ್ತೆ ಮತ್ತೆ ಓದಬೇಕಾದ ಅನುಭವ ಕಥನಗಳಲ್ಲಿ ಒಂದಾಗಿಸಿದೆ. ●

## ಪರಂಜ್ಯೋತಿಯವರ ಕೃತಿಗಳು

**ಅನುಭವ ಕಥನ:** ಮಂಜಿನೆಡೆಯ ಚಿತ್ರಗಳು
**ಕಥಾಸಂಕಲನ:** ಶೂನ್ಯ, ಅವತಾರ, ಆಸರೆ, ಕಳೆದುಹೋಗಿದ್ದು, ಕಣಿವೆ.
**ಕಾದಂಬರಿ:** ಪ್ರೀತಿಯಕಣ್ಣು, ಕೋಡೆಮಳೆ. ಪ್ರವಾಸಕಥನ' ಬೆಟ್ಟಸಾಲಿನ ಮೋಡಿ, ಕಂಡದ್ದು ಕಾಣದ್ದು.
**ಪ್ರಬಂಧ:** ನದಿನೀರಿನ ಸ್ಪೆಶಲ್, ಚಿನ್ನದ ಬೆನ್ನೇರಿ. ಇತಿಹಾಸ' ನೀಲಗಿರಿ ಸಾಮಾಜಿಕ ಸಾಂಸ್ಕೃತಿಕ ಕಣ್ಣೋಟ
**ಜೀವನ ಚರಿತ್ರೆ:** ಪೆರಿಯಾರ್, ತಿರುವಳ್ಳುವರ್
**ಮಕ್ಕಳ ಪುಸ್ತಕಗಳು:** ನಗೆಮದ್ದು, ಮಾತುಗಾರ ಮಲ್ಲಣ್ಣ, ಹೊಟ್ಟೆಕಿಚ್ಚಿನ ಪುಟ್ಟಮ್ಮ, ದುರಾಶೆಯ ಗಂಡ, ಅರಣ್ಯಗ್ರಾಮಕ್ಕೆ ಪ್ರವಾಸ, ಪಟಾಕಿಯ ಸಂಭ್ರಮ, ಬಿದಿರುಹೊಳೆಗೆ ಬೆಂಕಿ, ಪಂಚಿಗ್ಯಾಂಗ್, ಸೂರ್ಯನಲ್ಲಿಗೆ ನಿಯೋಗ.
**ಅನುವಾದಿತ ಮಕ್ಕಳ ಕತೆಗಳು:** ಅಡ್ವೆಂಚರ್ ಇನ್ ದಿ ಜಂಗಲ್ ವಿಲೇಜ್, ಸ್ಪೇಸ್‌ಷಟಲ್ ಅಂಗಾರಕ.